

ಶಾಶ್ವತವಾದ ಪ್ರಶ್ನೆ ಕೂಡ. ಪ್ರೇಮ ಎಂಬುದು ಯಾವ ಕಾರಣಕ್ಕೆ ಹುಟ್ಟಬಲ್ಲದು?

ಶಾಂತಿನಾಥ ದೇಸಾಯಿ ಅವರು ಬರವಣಿಗೆಗೆ ತೊಡಗಿದ್ದಾಗ ನವ್ಯದ ನಿಗಿನಿಗಿ ಕಾಲ. ಶಿಕ್ಷಣ ಮತ್ತು ಆಲೋಚನಾಕ್ರಮಗಳು ಪಾಶ್ಚಿಮಾತ್ಯ ನೆಲಗಳ ಸ್ಪರ್ಶ ದಕ್ಕಿಸಿಕೊಂಡಾಗ ಹುಟ್ಟಿದ ಅತ್ಯಂತ ಸಾಂಕೇತಿಕರೂಪದ ಮಾತುಗಳು ರೂಪುಗೊಳ್ಳಲು ಶುರುವಿಟ್ಟ ಕಾಲ. ಶಾಂತಿನಾಥರ 'ಮುಕ್ತಿ' ಕಾದಂಬರಿ ರಚನೆ ಆದಾಗ ಅವರಿಗೆ ಮೂವತ್ತೆರಡು ವರ್ಷ. ಅದು ಪ್ರಕಟ ಆಗಿದ್ದು 1961ರಲ್ಲಿ. ನವ್ಯದ ಆ ಕಾಲಮಾನ ಮತ್ತು ಅವರ ಮೂವತ್ತರ ಹರೆಯ, ಚೆಲುವು, ಅದರ ಬಿಸಿ ಮತ್ತು ರೋಮಾಂಚನವನ್ನು ಒಳಗೊಂಡ ತಲ್ಲಣಗಳು, ಯೇಟ್ಸ್-ಕಮೂ-ಕಾಫ್ಕಾರ ಸಹವಾಸದ ಪ್ರಭಾವವೂ ಅವರ ಮೇಲಿತ್ತು.

ದೇಹ, ಸೌಂದರ್ಯ, ಹಣ, ಸಾಂಗತ್ಯ, ಸೌಖ್ಯ ಭಾವ, ಆತ್ಮ ರಕ್ಷಣೆಯ ತಾಣ, ಆ ಕ್ಷಣದ ತುರ್ತು, ಒಂಟಿತನಕ್ಕೆ ಪರ್ಯಾಯ ಮದ್ದು, ಸಮಯ ಕಳೆಯುವಿಕೆ, ಕಳೆದುಕೊಂಡದ್ದರ ಸಾಪೇಕ್ಷತೆ, ಖಿನ್ನತೆಗೆ ಒರಗು ದಿಂಬು, ಹುಚ್ಚುತನ, ವಿವೇಕದ ಮಾರ್ಗ, ಆತ್ಮ ಸಂವಾದ, ಭೌತಿಕವಾದ ಬಾಳ ಸಾಂಗತ್ಯ, ಸಾವಿನ ಭಯ, ಅಧೀರತೆಗಳೆಲ್ಲ ಯಾವುದು ಎಂಬುದು ಗೌರೀಶನನ್ನು ನಿರಂತರ ಕಾಡುವ ಪ್ರಶ್ನೆ. ಇದು 'ಮುಕ್ತಿ' ಕಾದಂಬರಿ ಎತ್ತುವ ಪ್ರಶ್ನೆಯೂ ಹೌದು. ಇದಕ್ಕೆ ಉತ್ತರ ಬೇಕಲ್ಲ. ಉತ್ತರದ ಹಾಸುಗಳಾಗಿ ಶ್ರೀಕಾಂತ, ಸತ್ಯೇಂದ್ರ, ಸುಶೀಲ, ಮೇರಿ, ಕಾಮಿನಿ, ಡಾಲಿ, ಆಚಾರ್ಯ... ಹಲವು ಪಾತ್ರಗಳ ಮೂಲಕ ಹಲವು ಬಗೆಯ ನೋಟ ಮಾತು ಮತ್ತು ಪ್ರತಿಕ್ರಿಯೆಗಳು. ಸಾವಿನ ದವಡೆಯಲ್ಲಿ ಇರುವ ಭಾವುಕನಾದ ಶ್ರೀಕಾಂತ ಮತ್ತು ಪಕ್ಕಾ ಪ್ರಾಕ್ಟಿಕಲ್ ಆಗಿ ಬಾಳುವ ಸತ್ಯೇಂದ್ರರ ಮಧ್ಯೆ ಉರಿವ ಪಾತ್ರವಾಗಿ ಕಾಣುತ್ತಾನೆ ಗೌರೀಶ. ಪ್ರೇಮ, ಪ್ರೀತಿ, ದೇಹ ಸೌಂದರ್ಯ, ಭಗ್ನತೆ, ಪುಳಕ ಎಲ್ಲವೂ ಬಾಳಿನ ಆನುಷಂಗಿಕ ಅಂಶಗಳು ಎಂದು ಒಬ್ಬರು ಗೌರೀಶನ ತಲೆ ತಿಂದರೆ, ಇನ್ನೊಬ್ಬರು ನೌಕರಿ, ಹುದ್ದೆ, ಲಗ್ನ ಎಂದು ಅವನ ತಲೆ ಸವರುತ್ತಾರೆ. ಈ ಸಲಹೆ, ಮಾರ್ಗದರ್ಶನಗಳನ್ನು ಸ್ವೀಕರಿಸಿಯೂ, ಅಂತಿಮವಾಗಿ ತನಗೇನು ಬೇಕು ಎಂದು ಆಯ್ಕೆ ಮಾಡಬೇಕಾದ ಹೊಣೆ ಗೌರೀಶನ ಮೇಲೆಯೇ ಇರುತ್ತದೆ. ಇದು ಎಲ್ಲರ ಬಾಳಿನಲ್ಲಿಯೂ ಎದುರಾಗುವ ಸನ್ನಿವೇಶ.

ಪ್ರೇಮದ ಉದ್ವಿಗ್ನತೆ ಮತ್ತು ಸಾವಿನ ತಲ್ಲಣ ಎರಡೂ ಬಾಳಿನಲ್ಲಿ ಸಹಜವಾದುದೇ. ಪ್ರೇಮದ ಉದ್ದೇಶವನ್ನು ಮತ್ತು ಸಾವಿಗೆ ಕಾರಣವಾಗುವ ರೋಗವನ್ನು ಬಿಡಿಸುವುದು ಸುಲಭಸಾಧ್ಯವಲ್ಲ. ಕುಲುಮೆಯನ್ನು ದೇಹ ಸವರಿ ಬಂದ ಹಾಗೆ. ಬಾಳನ್ನು ರೂಪಿಸಿಕೊಳ್ಳಲು ಒಂದು ಸಹಾಯವಾದರೆ ಮತ್ತೊಂದು ಬಾಳಿನಿಂದ ನಿರ್ಗಮಿಸಲು ಹೇಳುತ್ತದೆ. ಪ್ರೇಮ ಭ್ರಾಮಕ ಲೋಕದ ದೈನ್ಯತೆಯನ್ನು ಪ್ರಚುರ ಪಡಿಸಿದರೆ, ಸಾವು ಲೋಕದ ಪಾರಮ್ಯವನ್ನು ಪರಿಚಯಿಸುತ್ತದೆ. ಇಂತಹ ಘನವಾದ ಧ್ರುವಗಳ ನಡುವೆ ಓಲಾಡುವ ಚಂಚಲ ನಾವೆಯಾಗಿ ಕಾಣಿಸುತ್ತಾನೆ ಗೌರೀಶ. ಪ್ರೇಮದ ಅಹವಾಲು, ಆಯ್ಕೆ, ತಿರಸ್ಕಾರ, ಇಂದ್ರಿಯ ದಾಹ ಬಿತ್ತಿದ ಸಮಸ್ಯೆಯಿಂದ ಬಿಡಿಸಿಕೊಳ್ಳಲು ಅಥವ ಮುಕ್ತಿ ಪಡೆಯಲು ಭೌತಿಕ ನೆಲೆಯನ್ನೇ ಬದಲಾಯಿಸಿ ಆಫ್ರಿಕಾಗೆ ಓಡಿ ಹೋಗುವಷ್ಟು ಜರ್ಜರಿತನಾಗಿರುತ್ತಾನೆ. ಇದು ಪ್ರೇಮಿಗಳೆಲ್ಲ ಹಾಯಬೇಕಾದ ಕೊಂಡವೇ ಸರಿ. ತನ್ನ ಪ್ರೇಮವನ್ನು ತಿರಸ್ಕರಿಸಿದ ವ್ಯಕ್ತಿ ಮತ್ತು ನೆನಪುಗಳಿಂದ ಬಿಡಿಸಿಕೊಳ್ಳಲು ಜಾಗವನ್ನೇ ಬದಲಾಯಿಸುವ ಕ್ರಮ ಸಹಜವಾದುದು ಮತ್ತು ಸ್ವಲ್ಪ ಮಟ್ಟಿಗೆ ಹಿತವೇ. ಆದರೆ ನೆನಪುಗಳು ಮತ್ತು ಅದರಿಂದ ಆದ ಗಾಯಗಳು ಜೊತೆಗೇ ಬರುತ್ತವಲ್ಲ.